

# ಮೊಬೈಲ್ ಗೀಳು ಬಿಡಿ; ಮಕ್ಕಳತ್ತ ಗಮನಕೊಡಿ...

ಮಕ್ಕಳ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ತಾಯಂದಿರು ಮನೆಯಲ್ಲಿ ಮಕ್ಕಳಿರುವಷ್ಟು ಸಮಯದಲ್ಲಿ ಅವರೊಂದಿಗೆ ಉತ್ತಮ ಚಟುವಟಿಕೆಗಳಲ್ಲಿ ತೊಡಗಿಕೊಂಡರೆ ಮಕ್ಕಳು ಹೆಚ್ಚು ಸುಸಂಸ್ಕೃತರಾಗಬಹುದು.

■ ಗೀತಾ ನೆಲ್ಲೀಕಾಯಿ

'ಮನೆಯೆ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರುವು' ಎಂಬ ಉಕ್ತಿಯನ್ನು ಇಂದು ಮತ್ತೆ ಮತ್ತೆ ಪೋಷಕರಿಗೆ ಜ್ಞಾಪಿಸಬೇಕಾಗಿದೆ. ಮಕ್ಕಳ ಕಲಿಕೆ ಪ್ರಾರಂಭವಾಗುವುದೇ ಮನೆಯ ಜನರನ್ನು ನೋಡಿ ಅನುಕರಿಸುವುದರಿಂದ. ಹಿಂದಿನ ತಲೆಮಾರಿನ ಜನರು ಎಳೆಯ ಮಕ್ಕಳಿನೊಂದಿಗೂ ಅವಕ್ಕೆ ಅರ್ಥವಾಗಲೀ ಬಿಡಲಿ ಸಂಭಾಷಿಸುತ್ತಿದ್ದರು, ಹಾಡು ಆಟ ಕಲಿಸುತ್ತಿದ್ದರು. ತಾರಮ್ಮಯ್ಯ ಮಾಡಿಸಿ ದೂರಿ, ದೂರಿ ಆಡಿಸಿ ಲಾಲಿ ಹೇಳಿ ರಂಜಿಸುತ್ತಿದ್ದರು. ಮಗುವೂ ಅನುಕರಿಸುತ್ತಲೇ ಅನೇಕ ವಿಷಯಗಳನ್ನು ಬೇಗ ಕಲಿಯುತ್ತಲಿತ್ತು. ಸ್ವಲ್ಪ. ಬೆಳೆದ ನಂತರ ಶಾಲೆಗೆ ಹೋಗದ್ದಿದ್ದರೂ ಮನೆಯಲ್ಲಿಯೇ ಹಿರಿಯರಿಂದ ಶ್ಲೋಕಗಳು, ಶಿಶುಪದ್ಯಗಳು ಎಣಿಕೆ ಹಾಗೂ ಅಕ್ಷರಾಭ್ಯಾಸವೂ ನಡೆಯುತ್ತಿತ್ತು ಯಾವ ಒತ್ತಡವೂ ಇಲ್ಲದೆ ನಡೆಯುತ್ತಿದ್ದ ಕಲಿಕೆ ಸಹ ಮಕ್ಕಳಿಗೆ ಆಟವಾಗುತ್ತಿತ್ತು. ಮನೆಯ ಸುರಕ್ಷಿತ ವಾತಾವರಣದ ಕಲಿಕೆ ಮಗುವಿನ ಸಮಗ್ರ ಬೆಳವಣಿಗೆಗೆ ಪೂರಕವಾಗಿತ್ತು.

ಇಂದು ಪರಿಸ್ಥಿತಿ ಬದಲಾಗಿದೆ. ತಾಯಿ, ತಂದೆ ಇಬ್ಬರೂ ಕೆಲಸಕ್ಕೆ ಹೋಗುವವರಾಗಿ, ಅಜ್ಜಿ ತಾತನ ವಾತ್ಸಲ್ಯವೂ ದೊರಕದ ಇಂದಿನ ಶಿಶುಗಳು 2–3 ತಿಂಗಳಿನಿಂದಲೇ ಕೆಲಸದವರ ಪಾಲಾಗಿದೆ. ಮಗುವನ್ನು ಆಡಿಸುವವರಿಲ್ಲ. ಕೆಲಸ ಮುಗಿಸಿ ಬರುವ ತಂದೆ ತಾಯಿಯರಿಗೆ ಮಗುವನ್ನಾಡಿಸಲು ಬಿಡುವಿಲ್ಲ. ಇದ್ದರೂ ಅವರು ಮೊಬೈಲ್ ನಲ್ಲಿ ನಿರತರು. ಮಗುವಿಗೆ ಹೊತ್ತಿಗೆ ಸರಿಯಾಗಿ ಊಟ ಕೊಟ್ಟರೆ ಆಯ್ತೆಂದು ತಿಳಿದವರು. ಹೀಗಾಗಿ ಎಷ್ಟೋ ಮಕ್ಕಳು ಮಾತು ಕಲಿಯುವುದು ಕೂಡಾ ತಡವಾಗುತ್ತಿದೆ.

ವರ್ಷದ ಮಗು ಲಾಲಿಯಿಂದ ಹಿಡಿದು ಆಟಗಳನ್ನೂ ಮೊಬೈಲ್‌ನಿಂದಲೇ ಕಲಿಯಬೇಕಾಗಿದೆ. ಹೀಗೆ ಪೋಷಕರಿಂದಲೇ ಕಲಿತ ಮೊಬೈಲ್ ಗೀಳು ಮಕ್ಕಳ ಸಮಗ್ರ ಬೆಳವಣಿಗೆಗೆ ಅಡ್ಡಿಯಾಗುತ್ತಿದೆ. ಮಕ್ಕಳು ದೊಡ್ಡವರಾದ ನಂತರ ಎಚ್ಚೆತ್ತುಕೊಳ್ಳುವ ಪೋಷಕರು ಕಲಿಕೆಯಲ್ಲಿ ಹಿಂದುಳಿದ ಅಥವಾ ಅಡ್ಡದಾರಿ ಹಿಡಿದ ಮಕ್ಕಳನ್ನು ಶಿಕ್ಷಿಸಲು ಮುಂದಾಗುತ್ತಾರೆ. ಅದರ ಪರಿಣಾಮಗಳನ್ನು ನಾವು ಪ್ರತಿದಿನದ ಸುದ್ದಿಗಳಲ್ಲಿ ಕೇಳುತ್ತಲೇ ಇದ್ದೇವೆ.

ತಾಯ್ತಂದೆಯರ ಪ್ರೀತಿ, ಗಮನದಿಂದ ವಂಚಿತರಾಗಿ ಬೆಳೆಯುವ ಮಕ್ಕಳು ಪ್ರೀತಿ, ಸಾಂಗತ್ಯಕ್ಕಾಗಿ ಗೆಳೆಯರನ್ನು ಅವಲಂಬಿಸುತ್ತಾರೆ. ಕೆಟ್ಟ ಸಹವಾಸ ಸಿಕ್ಕರೆ ಅವರ ಬಾಳೇ ನಾಶವಾಗುತ್ತದೆ. ಮಕ್ಕಳಿಗೆ ಪ್ರತಿಷ್ಠಿತ ಶಾಲೆಗಳಿಗೆ ಸೇರಿಸಿ, ಟ್ಯೂಷನ್‌ಗೆ ಕಳಿಸಿದರೆ ಮಕ್ಕಳು ಕಲಿಕೆಗೆ ಪೂರಕವಾಗುವುದಿಲ್ಲ.

ಇಂದಿನ ತಾಯ್ತಂದೆಯರು ಎಚ್ಚೆತ್ತು ಮಗುವಿನ ಆಟಪಾಠಗಳಲ್ಲಿ ಪಾಲ್ಗೊಂಡು ತಮ್ಮ ಕೆಲಸದ ಮಧ್ಯೆಯೂ ಸಾಕಷ್ಟು ಸಮಯ ಮಕ್ಕಳಿಗಾಗಿ ಮೀಸಲಿಡಬೇಕು. ಮಕ್ಕಳು ಕೇಳಿದ ವಸ್ತು ಕೊಡಿಸುವುದು ಮಾತ್ರ ಅವರ ಕರ್ತವ್ಯವಲ್ಲ. ಮೊಬೈಲನ್ನು ಪಕ್ಕಕ್ಕಿಟ್ಟು ಅವರನ್ನು ಆಟವಾಡಿಸಿ ಪಾಠ ಪ್ರವಚನಗಳ ಕಡೆ ಗಮನನೀಡಿದಾಗ ಅವರಿಗೂ ತಾವು ನಿರ್ಲಕ್ಷ್ಯಕ್ಕೆ ಒಳಗಾದೆವೆಂಬ ಭಾವ ಬರುವುದಿಲ್ಲ. ನಮ್ಮ ನಡೆನುಡಿಯನ್ನು ಮಕ್ಕಳು ಅನುಕರಿಸುವುದರಿಂದ ನಾವು ಅವರಿಗೆ ಮಾದರಿಯಾಗಬೇಕು.

ಮನೆಯವಾತ್ಸಲ್ಯ ಮಯ ವಾತಾವರಣದಲ್ಲಿ ನಡೆವ ಕಲಿಕೆ ಶಾಲೆ... ಅಥವಾ ಟ್ಯೂಷನ್‌ನಲ್ಲಿ ನಡೆಯುವ ಕಲಿಕೆಗಿಂತ ಹೆಚ್ಚು ಪರಿಣಾಮಕಾರಿ.

■